# ಸಚಿನ್ ಭೇಟಿ ಮಾಡಿದ ಪುಳಕ

ಭಾರತೀಯ ಕ್ರಿಕೆಟ್‌ನಲ್ಲಿ 'ಅಶ್ವಿನಿ ನಕ್ಷತ್ರ'ದಂತೆ ಮೆರೆದ ಧೀಮಂತ ನಾಯಕ ಸಚಿನ್ ತೆಂಡೂಲ್ಕರ್ ಅವರನ್ನು ಭೇಟಿ ಮಾಡಿ ಹಸ್ತಾಕ್ಷರ ಪಡೆದುಕೊಂಡಿದ್ದು ನನ್ನ ಸುಯೋಗ. ಅವರ ಸರಳ ಸಜ್ಜನಿಕೆ, ಉದಾರ ಗುಣ ಎಂದಿಗೂ ಮರೆಯುವಂಥದ್ದಲ್ಲ.

■ ಚಿತ್ರ-ಬರಹ: ಚನ್ನಗಿರಿ ಕೇಶವಮೂರ್ತಿ



ನನ್ನ ನೆಚ್ಚಿನ ಕ್ರಿಕೆಟ್ ಆಟಗಾರರನ್ನು ಭೇಟಿಯಾಗಬೇಕೆಂಬ ಹುಚ್ಚು ತವಕ ನನಗೆ ಮೊದಲಿನಿಂದಲೂ ಇದೆ. ಕರ್ನಾಟಕದ ಅನೇಕ ರಣಜಿ/ಟೆಸ್ಟ್ ಆಟಗಾರರನ್ನು ಕಂಡು, ಮಾತನಾಡಿರುವ, ಫೋಟೋ ಕ್ಲಿಕ್ಕಿಸಿಕೊಂಡಿರುವ ಅನುಭವವೂ ಉಂಟು. ಆದರೆ ಅಂತರರಾಷ್ಟ್ರೀಯ ಕ್ರಿಕೆಟ್ ರಂಗದಲ್ಲಿ ಭಾರೀ ಸದ್ದು ಮಾಡಿದ ವಿಶ್ವವಿಖ್ಯಾತ ಸಚಿನ್ ತೆಂಡೂಲ್ಕರ್ ರನ್ನು ಭೇಟಿಯಾಗಬೇಕೆಂಬ ನನ್ನ ಆಸೆ ಮಾತ್ರ ಈಡೇರಲಿಲ್ಲ ಎಂಬ ಕೊರಗು ನನ್ನಲ್ಲಿತ್ತು. ಆದರೆ ಕೊನೆಗೆ ಅದೂ ಈಡೇರಿತು.

ಈಗ್ಗೆ ಸುಮಾರು 15 ವರ್ಷಗಳ ಹಿಂದೆ 2003 ರಲ್ಲಿ ಕ್ರಿಕೆಟ್ ಬಗ್ಗೆ ಕನ್ನಡದಲ್ಲಿ ನಾನು ಬರೆದ ಪ್ರಪ್ರಥಮ ಪುಸ್ತಕ (ಭಾರತೀಯ ಕ್ರಿಕೆಟ್ ಇತಿಹಾಸ) ಆಗ ತಾನೇ ಪ್ರಕಟವಾಗಿತ್ತು. ಆ ಸಮಯದಲ್ಲಿಯೇ ತೆಂಡೂಲ್ಕರ್ ಬೆಂಗಳೂರಿಗೆ ಬಂದಿರುವುದು ಅರಿವಾದಾಗ ಹೇಗಾದರೂ ಮಾಡಿ ಅವರನ್ನು ಭೇಟಿ ಮಾಡಿ ನನ್ನ ಪುಸ್ತಕಕ್ಕೆ ಹಸ್ತಾಕ್ಷರ ಹಾಕಿಸಿಕೊಳ್ಳಬೇಕೆಂಬ ಮಹದಾಸೆ ಹೊತ್ತಿದ್ದೆ. ಆಗ ಭಾರತ ತಂಡದ ಕ್ರಿಕೆಟ್ ಆಟಗಾರರು ನೆಟ್ ಪ್ರಾಕ್ಟಿಸ್ ಗಾಗಿ ಬೆಂಗಳೂರಿಗೆ ಆಗಮಿಸಿದ್ದರು. ಆದರೆ ಅವರನ್ನು ಹೇಗೆ ಭೇಟಿ ಮಾಡುವುದು, ಎಲ್ಲಿ ಕಾಣುವುದು ಎಂಬ ತೊಳಲಾಟ ಕಾಡುತ್ತಿತ್ತು. ಚಿನ್ನಸ್ವಾಮಿ ಕ್ರೀಡಾಂಗಣ ದಲ್ಲಿಯೇ ಹೇಗಾದರೂ ಮಾಡಿ ಭೇಟಿಯಾಗೋಣವೆಂದರೆ ಭದ್ರತಾ ಸಿಬ್ಬಂದಿಯನ್ನು ದಾಟಿ ಹೋಗುವುದು ಅಸಾಧ್ಯವಾಗಿತ್ತು. ನಿರ್ದಿಷ್ಟ ಸ್ಥಳದಲ್ಲಿ ಇತರ ಪ್ರೇಕ್ಷಕರೊಡನೆ ದೂರದಿಂದ ಶಿಬಿರದಲ್ಲಿ ಪಾಲ್ಗೊಂಡ ಆಟಗಾರರನ್ನು ವೀಕ್ಷಿಸುವ ಅವಕಾಶವಿದ್ದರೂ ತೆಂಡೂಲ್ಕರ್ ರನ್ನು ಖಾಸಗಿಯಾಗಿ ಅಲ್ಲಿ ಭೇಟಿ ಮಾಡುವುದು ಸಾಧ್ಯವಿರಲಿಲ್ಲ. ಕಡೆಗೆ ಸ್ಟೇಡಿಯಂನಲ್ಲಿ ನನ್ನ ಸ್ನೇಹಿತರಿಂದ ಭಾರತದ ಆಟಗಾರರು 'ಅಶೋಕ ಹೋಟೆಲ್'ನಲ್ಲಿ ತಂಗಿರುವ ವಿಷಯ ತಿಳಿದುಕೊಂಡೆ. ನೇರವಾಗಿ ಹೋಟೆಲಿಗೆ ಹೋಗಿ ಏಕೆ ಭೇಟಿ ಮಾಡಬಾರದು ಎಂಬ ಆಲೋಚನೆ ಬಂದಿತಾದರೂ ಮತ್ತೆ ಅಲ್ಲಿ ಭದ್ರತಾ ವ್ಯವಸ್ಥೆಯಿಂದ ನನ್ನ ಆಸೆ ಫಲಿಸಲಾರದೆಂದು ಸುಮ್ಮನಾದೆ.

ನಂತರ ಹೇಗಾದರಾಗಲಿ ಎಂದು ತೆಂಡೂಲ್ಕರ್ ಅವರಿಗೆ ಸಂಕ್ಷಿಪ್ತವಾಗಿ ಕ್ರಿಕೆಟ್ ಬಗ್ಗೆ ನಾನು 'ಭಾರತೀಯ ಕ್ರಿಕೆಟ್ ಇತಿಹಾಸ' ಎಂಬ ಪುಸ್ತಕವನ್ನು ಕನ್ನಡದಲ್ಲಿ ಬರೆದಿರುವುದಾಗಿ; ಆ ಪುಸ್ತಕ ತೋರಿಸಿ ಅದರಲ್ಲಿ ಅವರ ಹಸ್ತಾಕ್ಷರ ಪಡೆಯಲು ಉತ್ಸುಕನಾಗಿರುವುದಾಗಿಯೂ ಮತ್ತು ನಾನು ಅವರ ಕಟ್ಟಾ ಅಭಿಮಾನಿಯಾಗಿರುವುದಾಗಿಯೂ ತಿಳಿಸಿ ಕಾಗದ ಬರೆದೆ. 'ಶ್ರೀ ಸಚಿನ್ ತೆಂಡೂಲ್ಕರ್, ಕೇರ್ ಆಫ್ ಹೋಟೆಲ್ ಅಶೋಕ, ಬೆಂಗಳೂರು' ಎಂದಷ್ಟೇ ವಿಳಾಸ ಬರೆದು ಪೋಸ್ಟ್ ಮಾಡಿದೆ. ಆ ಸಮಯದಲ್ಲಿ ಆ ನನ್ನ ಪತ್ರ ಖುದ್ದಾಗಿ ಅವರ ಕೈ ಸೇರುತ್ತೋ ಇಲ್ಲವೋ ಅಥವಾ ಅವರ ಪರವಾಗಿ ಬೇರೆ ಯಾರೋ ಉತ್ತರಿಸುತ್ತಾರೋ ಅಥವಾ ಪತ್ರ ತಲುಪಿದರೂ ಅದಕ್ಕೆ ಉತ್ತರಿಸದೆ ನನ್ನ ಪತ್ರ ಕಸದ ಬುಟ್ಟಿಗೆ ಹೋಗುವುದೋ ಎಂಬ ಆತಂಕದಲ್ಲಿಯೇ ಆ ದಿನ ಕಳೆದೆ.

ಪತ್ರ ಬರೆದು ಎರಡು ದಿನಗಳಾದರೂ ಉತ್ತರ ಬರದಿದ್ದಾಗ ನಿರಾಶೆಗೊಂಡೆ. ಮೂರನೆಯ ದಿನ ನಾನು ರಾತ್ರಿ ಮನೆ ಮಂದಿಯೊಡನೆ ಊಟಕ್ಕೆ ಕುಳಿತಾಗ ಲ್ಯಾಂಡ್‌ಲೈನ್‌ಗೆ ಕರೆ ಬಂದಿತು (ಆಗಿನ್ನೂ ಮೊಬೈಲ್ ಫೋನ್ ಬಳಕೆಯಲ್ಲಿರಲಿಲ್ಲ). ನನ್ನ ಮಗಳು ಸವಿತಾ ಫೋನ್ ಕರೆಗೆ ಓಗೊಟ್ಟು ಮಾತನಾಡಿ ರಿಸೀವರ್ ನನ್ನ ಕೈಗೆ ಕೊಟ್ಟು 'ಯಾರೋ ಸಚಿನ್ ಅಂತೆ ನಿನ್ನೊಡನೆ ಮಾತನಾಡಬೇಕಂತೆ' ಎಂದಳು. ನಮ್ಮ ಮನೆಯಲ್ಲಿ ನನ್ನ ಮಗನನ್ನು ಬಿಟ್ಟರೆ ಮಗಳಿಗಾಗಲೀ, ಪತ್ನಿಗಾಗಲೀ ಕ್ರಿಕೆಟ್ ಬಗ್ಗೆ ಆಸಕ್ತಿ ಅಷ್ಟಕ್ಕಷ್ಟೇ. ನನ್ನ ಪತ್ರಕ್ಕೆ ಅದುವರೆಗೂ ಉತ್ತರ ಬರದಿದ್ದರಿಂದ ನನಗೆ ತಕ್ಷಣ ಅದು ತೆಂಡೂಲ್ಕರ್ ಕರೆ ಎಂದೂ ಗಮನಕ್ಕೆ ಬರಲಿಲ್ಲ. ನಾನು ಫೋನು ತೆಗೆದುಕೊಂಡು 'ಹಲೋ' ಎಂದೊಡನೆ, ಅತ್ತ ಕಡೆಯಿಂದ 'ಹಲೋ ಕೇಶವಮೂರ್ತಿ, ಐ ಆಮ್ ಸಚಿನ್ ತೆಂಡೂಲ್ಕರ್ ಸ್ಪೀಕಿಂಗ್' ಎಂಬ ಧ್ವನಿ ಕೇಳಿ ಬಂದಿತು. ನನಗೆ ಆ ಕ್ಷಣ ಗಾಬರಿ, ಆತಂಕ ಮತ್ತು ಸಂತೋಷ ಎಲ್ಲದರ ಅನುಭವ ಒಮ್ಮೆಗೆ ಆಯಿತು. ಸಾವರಿಸಿಕೊಂಡು ಕೆಲ ಕ್ಷಣಗಳ ನಂತರ 'ಗುಡ್ ಈವನಿಂಗ್ ಸರ್, ಐ ಆಮ್ ಸೊ ಹ್ಯಾಪಿ ಟು ಹಿಯರ್ ಯುವರ್ ವಾಯ್ಸ್' ಎಂದೆ. ನಂತರ 'ಸಾರೀ, ಮೈ ಡಾಟರ್ ಕುಡ್ ನಾಟ್ ರೆಕಗ್ನೈಸ್ ಯುವರ್ ವಾಯ್ಸ್ ' ಎಂದಾಗ ಅವರು 'ನೆವರ್ ಮೈಂಡ್, ಐ ರಿಸೀವ್ಡ್ ಯುವರ್ ಲೆಟರ್, ಪ್ಲೀಸ್ ಮೀಟ್ ಮಿ ಅಟ್ ಚಿನ್ನಸ್ವಾಮಿ ಸ್ಟೇಡಿಯಂ ಟುಮಾರೊ' ಎಂದರು. 'ಸರ್, ದೇರೀಸ್ ಟೂ ಮಚ್ ಸೆಕ್ಯೂರಿಟಿ ಇನ್ ದಿ ಸ್ಟೇಡಿಯಂ' ಎಂದು ನಾನು ಉತ್ತರಿಸಿದಾಗ ಅವರು ಸ್ವಲ್ಪವೂ ವಿಚಲಿತರಾಗದೆ 'ದೆನ್ ಯು ಮೀಟ್ ಮಿ ಅಟ್ ಹೋಟೆಲ್ ಅಶೋಕ ಟುಮಾರೊ ಮಾರ್ನಿಂಗ್ ಅಟ್ ನೈನ್ ಒಕ್ಲಾಕ್, ಐ ವಿಲ್ ಟೆಲ್ ದಿ ರಿಸೆಪ್ಷನ್, ಹ್ಯಾವ್ ಎ ನೈಸ್ ಡೇ, ಗುಡ್‌ನೈಟ್' ಎಂದು ಹೇಳಿದಾಗ ನನ್ನ ಸಂತೋಷ ಮೇರೆ ಮೀರಿತ್ತು.

ಮಾರನೆಯ ದಿನ ನಾನು ಬಲವಂತದಿಂದ ನನ್ನ ಮಗಳನ್ನೂ ಕರೆದು ಕೊಂಡು, ನನ್ನ ಮಗ (ಸಂಜಯ್) ಮತ್ತು ಅಣ್ಣನ ಮಗ (ಅಜಯ್)ನೊಡನೆ ನಿಗದಿತ ಸಮಯಕ್ಕೆ ಸರಿಯಾಗಿ ಹೋಟೆಲ್ ಅಶೋಕ ತಲುಪಿದೆವು. ತೆಂಡೂಲ್ಕರ್ ಸರಿಯಾಗಿ ಒಂಬತ್ತು ಗಂಟೆಗೆ ತಮ್ಮ ರೂಮಿನಿಂದ ಹೊರಬಂದು ನಮ್ಮನ್ನು ಕಂಡು ಪ್ರೀತಿಯಿಂದ ಮಾತನಾಡಿಸಿದರು. ಅವರಿಗೆ ವಂದಿಸಿ ನನ್ನ ಪುಸ್ತಕವನ್ನು ಅವರಿಗೆ ನೀಡಿದಾಗ, ಕನ್ನಡ ಬರದಿದ್ದರೂ, ಅದರಲ್ಲಿನ ಇಂಗ್ಲಿಷ್ ಒಕ್ಕಣೆ ಮತ್ತು ನನ್ನ ಬಗ್ಗೆ ಆಸ್ಟ್ರೇಲಿಯಾದ ಖ್ಯಾತ ಕ್ರಿಕೆಟ್ ಚರಿತ್ರಕಾರ ಮತ್ತು ಅಂಕಣಕಾರ/ಲೇಖಕ ಕೆರ್ಸಿ ಮೆಹರ್ ಹೋಮ್ಜಿ ಬರೆದ ಪರಿಚಯ ಲೇಖನದ ಮೇಲೆ ಕಣ್ಣಾಡಿಸಿ, ತೃಪ್ತಿಪಟ್ಟು 'ಹ್ಯಾಪಿ ಟು ನೋಟ್ ದಟ್ ಯು ಆರ್ ಸೊ ಇಂಟರೆಸ್ಟೆಡ್ ಇನ್ ಕ್ರಿಕೆಟ್ ಅಂಡ್ ರಿಟನ್ ಎ ಕ್ರಿಕೆಟ್ ಬುಕ್ ಅಟ್ ದಿಸ್ ಏಜ್ (ನನಗಾಗ 64 ವರ್ಷ), ವಿಶ್ ಯು ಆಲ್ ದಿ ಬೆಸ್ಟ್' ಎಂದು ಹೇಳಿ ನನ್ನ ಪುಸ್ತಕಕ್ಕೆ ಹಸ್ತಾಕ್ಷರ ನೀಡಿ ನಮ್ಮೆಲ್ಲರೊಡನೆ ಫೋಟೊ ತೆಗೆಸಿಕೊಂಡರು. ಈ ಕ್ಷಣಗಳು ನನ್ನ ಜೀವನದಲ್ಲಿ ಎಂದಿಗೂ ಮರೆಯಲಾಗದ ಸವಿನೆನಪಾಗಿ ಉಳಿದಿದೆ. ■